**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪುಟ್ಟಣ್ಣ, ಶ್ರೀ ಡಿ.ಟಿ ಶ್ರೀನಿವಾಸ ಇವರು ಮಂಡಿಸಿರುವ ನಿಯಮ-72ಕ್ಕೆ ಉತ್ತರ**

**ವಿಷಯ:-**

**ರಾಜ್ಯದಲ್ಲಿ 1995 ರಿಂದ 2025ರ ಅವಧಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಅನುದಾನರಹಿತವಾಗಿ ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿ ನೂರಾರು ಶಾಲೆಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುತ್ತಾ ಬರುತ್ತಿವೆ. ಸದರಿ ಶಾಲೆಗಳಲ್ಲಿ ಸಾವಿರಾರು ಬೋಧಕ ಬೋಧಕೇತರ ಸಿಬ್ಬಂದಿಯವರು ಕನಿಷ್ಠ ವೇತನ ಪಡೆದು ಉತ್ತಮ ಶಿಕ್ಷಣ ನೀಡುತ್ತಾ ಬರುತ್ತಿದ್ದಾರೆ. ಈ ಸಿಬ್ಬಂದಿ ವರ್ಗದವರು ಇದನ್ನೆ ನಂಬಿಕೊಂಡು ಜೀವನ ನಡೆಸುತ್ತಿದ್ದು ಬಹಳ ಸಂಕಷ್ಟ ಎದುರಿಸುತ್ತಿದ್ದಾರೆ. ಆದ್ದರಿಂದ 1995 ರಿಂದ 2025ರವರೆಗೆ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು 2026-27ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕೆಂಬ ವಿಷಯವನ್ನು ನಿಯಮ- 72ರಲ್ಲಿ ಪ್ರಸ್ತಾಪಿಸಿರುತ್ತಾರೆ.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ:ಇಡಿ 63 ಟಿಪಿಯು 2003, ದಿನಾಂಕ:07.05.2007, ಇಡಿ 59 ಪಿಎಂಸಿ 2006, ದಿನಾಂಕ:06-10-2007 ಮತ್ತು ಇಡಿ 217 ಪಿಎಂಸಿ 2008, ದಿನಾಂಕ:08-09-2008ರ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳು ಮತ್ತು ಮಾನದಂಡನ್ನು ಪೂರೈಸಿದ ಅರ್ಹ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿರುತ್ತದೆ. ಅದರಂತೆ ಸದರಿ ಅವಧಿಯವರೆಗೆ ಪ್ರಾರಂಭಿಸಲಾದ ಕನ್ನಡ ಮಾಧ್ಯಮದ ಅನುದಾನಿತ ಪ್ರೌಢಶಾಲಾ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲಾಗಿರುತ್ತದೆ.

1995 ರಿಂದ 2025ರವರೆಗೆ ಪ್ರಾರಂಭವಾಗಿ ನಡೆಯುತ್ತಿರುವ ಖಾಸಗಿ ಅನುದಾನರಹಿತ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಸಹಾಯನುದಾನಕ್ಕೆ ಒಳಪಡಿಸುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಸಂಖ್ಯೆ: ಇಪಿ 84 ಎಸ್‌ಇಎಸ್ 2026**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**